Rd No B G 155 10-3-1970

SATYAVADI Daily, MYSORE 4 53 rd Year of Publication

Golden Jubilee Celebrated Paper

ಸತ್ಯವಾದಿ

ಸ್ವರ್ಣ ಮಹೋತ್ಸವ ಸಂವೇರಿಸಿದ ಪತ್ರಿಕೆ

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮೈಸೂರು ಶಾಸಕರಿಂದ ಸಾಮೂಹಿಕ ರಾಜೀನಾಮೆ

.... ವಾರ್ತೆಗಳು ...

ಟೋಕಿಯೊ— ಜಪಾನು ಭಾರತಕ್ಕೆ 7 ಮಿಲಿಯ ಡಾಲರು ಕೊಡಲಿದೆ

ಬೆಳಗಾಂ — ಹಳೇ ಕಾಂಗ್ರೆಸ್ಸಿನ ಜಿಲ್ಲಾ ಸಮಿತಿಯು, ಕೂಡಲೇ ಮಹಾರ್ಜ ಕಮಿಷನ್ನಿನ ವರದಿಯನ್ನು ಜಾರಿಗೆ ತರಬೇಕೆಂದೂ, ತಪ್ಪಿದರೆ ಗಡಿ ಚಳವಳಿಯನ್ನು ತೀವ್ರಗೊಳಿಸಲಾಗುವುದೆಂದೂ ಕೇಂದ್ರಕ್ಕೆ ಎಚ್ಚರಿಕೆ ಕೊಟ್ಟಿದೆ.

ಮದರಾಸು— ಕೇಂದ್ರದ ಉಪ ಪ್ರವಾಸ ಸಚಿವೆ ಶ್ರೀಮತಿ ಸರೋಜಿನಿ ಮಹಿಷಿಯವರು, ಮಹಾರ್ಜ ಕಮಿಷನ್ ನಿರ್ಣಯವನ್ನು ಜಾರಿಗೆ ತರುವಂತೆ ಪ್ರಧಾನಿಯವರನ್ನು ತಾವು ಕೇಳಿಕೊಳ್ಳುವುದಾಗಿ ಹೇಳಿದರು

ಮದರಾಸು— ರಾಜ್ಯ ಸ್ವಾತಂತ್ರ್ಯ ಪಡೆಯಲು ಪಾರ್ಲಿಮೆಂಟರಿ ರೀತಿಯಿಂದ ಸಾಧ್ಯವಾಗದಿದ್ದರೆ, ಅದನ್ನು ಸಾಧಿಸಲು ಚಳವಳಿ ಹೂಡುವುದಾಗಿ ತಮಿಳು ನಾಡು ಮುಖ್ಯ ಮಂತ್ರಿ ಶ್ರೀ ಕರುಣಾನಿಧಿಯರು ಹೇಳಿದರು.

ಹೊಸಪೇಟೆ— ಬೆಳಗಾವಿಯನ್ನು ಮೈಸೂರು ಮಹಾರಾಷ್ಟ್ರಗಳಿಗೆ ಹಂಚುವ ಕೇಂದ್ರದ ಯೋಜನೆಯನ್ನು ಇಲ್ಲಿಯ ಪೌರ ಸಭೆಯ ವಿಶೇಷಾಧಿವೇಶನದಲ್ಲಿ ಪ್ರತಿಭಟಿಸಲಾಯಿತು.

ಜುಮ್ಮಾಟಲೇಯ (ಬೀಹಾರ್) — ರೂ 1 ಲಕ್ಷ ಬೆಲೆಯ ಸಿದ್ಧ ಗೊಳಿಸಿದ ಮತ್ತು ಕಚ್ಚಾ ಕಾಗೇಬಂಗಾರವನ್ನು ಒಂದು ಕಾಗೇಬಂಗಾರ ಕಾರ್ಖಾನೆಯಿಂದ ಸಶಸ್ತ್ರ ಡಕಾಯಿತರು ಲೂಟಿ ಮಾಡಿಕೊಂಡು ಹೋದರು.

ನವದೆಹಲಿ— ನೇತ್ರದಾನ ಚಳವಳಿಯನ್ನು ಹೆಚ್ಚು ಜನಪ್ರಿಯಗೊಳಿಸಲು ಅಖಿಲ ಭಾರತ ನೇತ್ರದಾನ ಸಂಘದವರು ಕೈಗೊಳ್ಳುತ್ತಿರುವ ಪ್ರಯತ್ನಗಳ ಬಗ್ಗೆ ಕೇಂದ್ರದ ಮಂತ್ರಿ ಶ್ರೀ ಕೆ ಕೆ ಷಾರವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿ, ಅಂಧರಿಗೆ ಕಣ್ಣುಗಳನ್ನು ನೀಡಿ ಸಮಾಜದಲ್ಲಿ ಉಪಯುಕ್ತ ನಾಗರೀಕರಂತಾಗಲು ಈ ನೇತ್ರದಾನದಿಂದ ಸಾಧ್ಯವೆಂದು ಹೇಳಿದರು.

ಗಡಿ ವಿಷಯದಲ್ಲಿ

ಬೆಂಗಳೂರು— ಪ್ರಧಾನಿ ಇಂದಿರಾರವರು ತಮಗೆ ಬರೆದಿರುವ ಕಾಗದದಲ್ಲಿ ಮೈಸೂರು-ಮಹಾರಾಷ್ಟ್ರ ಗಡಿ ವಿಷಯದಲ್ಲಿ ತಮ್ಮ ಸೂಚನೆ ಪ್ರಾಯೋಗಿಕವಾದುದೆಂದು ತಿಳಿಸಿರುವುದಾಗಿ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಶಾಸನ ಸಭೆಯಲ್ಲಿ ತಿಳಿಸಿದರು.

★

ರಾಜಧನ ರದ್ದಿನ ಸಮಸ್ಯೆ

ನವದೆಹಲಿ— ರಾಜಧನ ವಜಾಮಾಡುವ ಸರ್ಕಾರದ ಕಾರ್ಯದಲ್ಲಿ ಮಾಜಿ ರಾಜರು ಸಹಕರಿಸಬೇಕೆಂಬ ಪ್ರಧಾನಿ ಇಂದಿರಾರವರ ಮನವಿಯನ್ನು ರಾಜರ ಒಕ್ಕೂಟದ ವಕ್ತಾರರಾದ ಧಾರಂಗಾಧ್ರ ಮಹಾರಾಜರು ತಿರಸ್ಕರಿಸಿರುವರು — ಇದು ಹೆದ್ದಾರಿ ಡಕಾಯಿತನು ತನ್ನ ಬಂದೂಕಕ್ಕೆ ಮದ್ದು ಗುಂಡು ತುಂಬಿ ಹಾರಿಸಿ ದಾರಿಯಲ್ಲಿ ಹೋಗುವವರನ್ನು ಇದ್ದದ್ದನ್ನೆಲ್ಲಾ ಕೊಟ್ಟು ಹೋಗುವಂತೆ ಹೇಳಿದಂತಿದೆ, ಎಂದಿರುವರು

★

ಹಳೇ ನಾಣ್ಯದ ಆಂಚೇಚೀಟು

ನವದೆಹಲಿ— ದೇಶದಲ್ಲಿ 1400 ಆಂಚಿ ಕಛೇರಿಗಳಲ್ಲಿ ಹಳೇ ನಾಣ್ಯ ಮೌಲ್ಯದ ಆಂಚೇ ಚೀಟು ಉಪಯೋಗಿಸಲಾಗುತ್ತಿದೆ ಎಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು

★

ಬೆಲೆ ಏರಿಕೆ

ವಿಜಯನಗರ— ಕೇಂದ್ರದ ಬಜೆಟ್ಟಿನಲ್ಲಿಯ ಯೋಜನೆಗಳಿಂದ, ಸೀಮೆಎಣ್ಣೆ, ಸಕ್ಕರೆ, ಸಿಗರೇಟು, ಪಾರ್ ಬೆಲೆ ಏರಿದೆ.

○

ಬೀದರ್ ಬಂದ್

ಬೀದರ್— ಗಡಿ ಬಗ್ಗೆ ಕೇಂದ್ರ ಯೋಜನೆ ಪ್ರತಿಭಟಿಸಿ ತಾ || 13 ರಂದು ಬೀದರ್ ಬಂದ್ ಏರ್ಪಡಿಸಲಾಗಿದೆ.

ಮೈಸೂರು ಎಂಪಿಗಳು ಮತ್ತು ಶಾಸಕರು

ಮೈಸೂರು— ಕೇಂದ್ರವು ಮಹಾರ್ಜ ಕಮಿಷನ್ ಶಿಫಾರಸು ಬಿಟ್ಟು ಬೇರೆ ಮಾರ್ಗ ಹಿಡಿದರೆ, ಪಾರ್ಲಿಮೆಂಟು ಸದಸ್ಯರೂ ಮೈಸೂರು ಶಾಸಕರೂ ಸಾಮೂಹಿಕವಾಗಿ ರಾಜೀನಾಮೆ ಕೊಡಬಹುದೆಂದು ಹೇಳಲಾಗಿದೆ — ಈ ಬಗ್ಗೆ ಏನೂ ನಿರ್ಧಾರವಾಗಿರದಿದ್ದರೂ, ಅನಿವಾರ್ಯವಾದರೆ ಇದು ನಡೆಯುವುದೆಂದು ಮೈಸೂರು ಎಂಪಿಗಳ ಮತ್ತು ಮೈಸೂರು ನಾಯಕರ ನಿಯೋಗದಲ್ಲಾದ ಚರ್ಚೆಯಿಂದ ವ್ಯಕ್ತವಾಗಿದೆ — ಮೈಸೂರು ನಿಯೋಗವು ಮಹಾರ್ಜ ನಿರ್ಣಯವನ್ನು ಅಂಗೀಕರಿಸುವಂತೆ ಗೃಹಮಂತ್ರಿ ಶ್ರೀ ಚವನ್ನರನ್ನು ಒತ್ತಾಯ ಮಾಡಿತು.

●

ಗಾಂಧೀಜೀ ವಿಷಯದಲ್ಲಿ

ಬೊಂಬಾಯಿ— ಇಲ್ಲಿ ಏರ್ಪಡಿಸಿರುವ 26 ಮೂಕ ದೃಶ್ಯಗಳುಳ್ಳ ಗಾಂಧೀಜೀ ಜೀವಿತ ಸಂಬಂಧದ ಪ್ರದರ್ಶನವು ತುಂಬಾ ಆಕರ್ಷಣೀಯವಾಗಿದೆ.

★

ಗರ್ಭ ನಿರೋಧ ಮಾತ್ರೆಗಳು

ನವದೆಹಲಿ— ಬಾಯಿಯಿಂದ ಸೇವಿಸುವ ಗರ್ಭನಿರೋಧ ಮಾತ್ರೆಗಳನ್ನು ನಿಲ್ಲಿಸಲು ಸರ್ಕಾರದ ಪರ್ಯಾಲೋಚನೆಯಲ್ಲಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು

★

ವಿಶ್ವ ಯಾತ್ರಾ ಕೇಂದ್ರ

ನವದೆಹಲಿ— ಬುದ್ಧನ ಜನ್ಮಸ್ಥಳವಾದ ಹಿಮಾಲಯದಲ್ಲಿನ ಪುರಾತನ ತೋಟದ ನಗರವಾದ ಲುಂಬಿನಿಯನ್ನು ವಿಶ್ವ ಯಾತ್ರಾ ಕೇಂದ್ರವಾಗಿ ಅಭಿವೃದ್ಧಿಗೊಳಿಸಲ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯು ಥಾಂಟರ ಸೂಚನೆಯಂತೆ ರೂ. 4.25 ಲಕ್ಷದ ಯೋಜನೆ ತಯಾರಿಸಿದೆ.

ವುಡ್‌ಲ್ಯಾಂಡ್ ಜನಸಂದಣಿಯ 10ನೇ ವಾರ
ಶಿ ನ ಅಮೋಘ ಪ್ರಾರಂಭ

ಗೆಜ್ಜೆಪೂಜೆ

ನಟವರ್ಗ— ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ

ಆಪೆರಾ— ಅನೂಘ 2 ವಾರ
.... ಮನಮೋಹಕ ತಮಿಳು ಚಿತ್ರ ....
ಇರು ಕೋಡುಗಳ

ಜೆಮಿನಿ ಗಣೇಶ್, ತಾಯಿ ನಾಗೇಶ್ ಮತ್ತು ಸಹಚರರ್ ಜಾನಕಿ ಅಭಿನಯ

ವಿಜ್ಞಾನದಿಂದ ಧರ್ಮಕ್ಕೆ ಆತಂಕ

ಪೋಪ್ ಪಾಲ್‌ರವರು ವಿಜ್ಞಾನವನ್ನು ನಿಂದಿಸಿ, ಅದರಿಂದ ಧಾರ್ಮಿಕ ಮನುಷ್ಯನ ಮನಸ್ಸಾಕ್ಷಿಯು ಆಶಕ್ತವಾಗುತ್ತಲೂ ಮುಂಕುಗೊಳ್ಳುತ್ತಲೂ ಇದ್ದು, ಧಾರ್ಮಿಕ ಕತ್ತಲೆಯು ನವೀನ ಪ್ರಪಂಚದ ಮೇಲೆ ಹರಡುತ್ತಿದೆ: ದೇವರು ಸತ್ತಿರುವನು ಎಂದೂ ಧೈರ್ಯವಾಗಿ ಜನರು ಹೇಳಲು ಹೊರಟಿದಾರೆ ಎಂದೂ, ಸೇಂಟ್ ಪೀಟರ್ಸ್ ಸ್ಕೇರಿನಲ್ಲಿ ಮಾತ್ರಿಕರನ್ನು ಕುರಿತು ಮಾಡಿದ ಭಾಷಣದಲ್ಲಿ ಪೋಪ್‌ರವರು ಹೇಳಿದರು

400000 ವರ್ಷಗಳ ಹಿಂದಿನದು

ಮಾನವ ವಿಜ್ಞಾನ ಮತ್ತು ಪ್ರಾಚೀನ ವಸ್ತು ಸಂಶೋಧನಾ ಭಾಗದ ಅಧ್ಯಕ್ಷ ಪ್ರೊಫೆಸರ್ ಸಂಕಾಲಿಯಾರವರು ಈಚೆಗೆ ಮಾಡಿದ ಉಪನ್ಯಾಸದಲ್ಲಿ– ಪಹಲಗಾಂನಲ್ಲಿ ಸಮುದ್ರ ಮಟ್ಟಕ್ಕೆ 7000 ಅಡಿ ಎತ್ತರದಲ್ಲಿ ಸಿಕ್ಕಿದ ಕಲ್ಲಿನ ಸಲಕರಣೆಗಳಿಂದ, ಕಾಶ್ಮೀರದಲ್ಲಿ 400000 ವರ್ಷಗಳ ಹಿಂದೆ ಮಾನವನು ವಾಸಿಸುತ್ತಿದ್ದನೆಂಬುದು ವ್ಯಕ್ತಪಟ್ಟಿದೆ ಎಂದು ಹೇಳಿದರು.

ಮನನಾರ್ಹ ವಿಷಯ

ಜಗತ್ತಿನ ಎಲ್ಲ ದುಃಖಗಳಿಗೂ ಮನುಷ್ಯನ ಸ್ವಾರ್ಥತೆ, ಅತ್ಯಾಸೆ, ಕಾಮ ಕ್ರೋಧಗಳೇ ಕಾರಣವಾಗಿದೆ.

ಜ್ಞಾನದಾನವನ್ನು ತೆಗೆದುಕೊಳ್ಳುವವನಿಗಿಂತ ಅದನ್ನು ಕೊಡುವವನಲ್ಲಿ ಆತುರವು ಹೆಚ್ಚಾಗಿರುವುದು ಪರಮಾವಶ್ಯಕವಾಗಿದೆ.

ಸೃಷ್ಟಿಕರ್ತನ ಉದ್ದೇಶವು ಪ್ರತಿಮೂಲವಾಗಿದ್ದರೂ ಮನುಷ್ಯನ ಉದ್ದೇಶವು ವಂಚನಾತ್ಮಕವಾಗಿ ಹೋಗಿದೆ.

SHAKTI SUDHA

A Superb Tonic

Help The Gorakshana



ದೇಶಕ್ಕೆ ಬೇಕಾಗಿರುವದು
ಆಹಾರ.
ಜಿ.ಇ.ಎಫ್. ಪಂಪು ಸೆಟ್ಟುಗಳು
ಅದರ ಪರಿಹಾರ
ಅತ್ಯಂತ ಆಧುನಿಕ ಶಾಸ್ತ್ರೀಯ ರೀತಿಯಿಂದ
ತಯಾರಿಸಲ್ಪಟ್ಟ
ಜಿ. ಇ. ಎಫ್.
ಪಂಪು ಸೆಟ್ಟುಗಳನ್ನು
ಉಪಯೋಗಿಸಿ ಹೆಚ್ಚು ಬೆಳೆಯಿರಿ.
ದೇಶದ ಸಂಪತ್ತನ್ನು ಹೆಚ್ಚಿಸಲು
ಹೆಚ್ಚು ಆಹಾರ ಬೆಳೆಯಲು
ಜಿ.ಇ.ಎಫ್. ಪಂಪುಸೆಟ್ಟುಗಳನ್ನೇ
ಉಪಯೋಗಿಸಿರಿ.
: ತಯಾರಕರು :
ಗೌರ್ನಮೆಂಟ್ ಎಲೆಕ್ಟ್ರಿಕ್
ಫ್ಯಾಕ್ಟರಿ, ಬೆಂಗಳೂರು.
ಬೇಡಿಕೆಗಾಗಿ :-
ಮೆ|| ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್,
ನಂ. 36 'ಹರಿನಿವಾಸ್'
ಕನಿಂಗ್‌ಹ್ಯಾಮ್ ರೋಡ್,
ಬೆಂಗಳೂರು-1
ಅವರೊಂದಿಗೆ ವ್ಯವಹರಿಸಿ.

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore